# ಅರಣ್ಯ ಇಲಾಖೆಯಲ್ಲಿ ನೇಮಕ

## ವಾಚಕರ ವಿಜಯ

ಕಳೆದ ಸುಮಾರು ಎರಡೂವರೆ ತಿಂಗಳಿಂದ ಅರಣ್ಯ ವಿಜ್ಞಾನಿಗಳ ಎರಡೂ ಕಾಲೇಜಿನ (ಶಿರಸಿ ಮತ್ತು ಪೊನ್ನಮಪೇಟ) ವಿದ್ಯಾರ್ಥಿಗಳು ರಾಜ್ಯ ಅರಣ್ಯ ಇಲಾಖೆಯಲ್ಲಿ ಆಗುತ್ತಿರುವ ಅನ್ಯಾಯ ಮುಂದೊಡ್ಡಿ ತರಗತಿ ಬಹಿಷ್ಕರಿಸಿ ಸತ್ಯಾಗ್ರಹ ಮಾಡುತ್ತಿದ್ದರೂ ಸರಕಾರ ಸೂಕ್ತ ಪರಿಹಾರ ಹುಡುಕುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿದೆ ಎಂಬುದು ಜಗಜ್ಜಾಹೀರ. ಐತಿಹಾಸಿಕವಾಗಿ ಅಧ್ಯಯನ ಮಾಡಿದಾಗ ಅರಣ್ಯ ವಿಜ್ಞಾನಗಳ ಕಾಲೇಜುಗಳೇ 1985ಕ್ಕೆ ಮುಂಚೆ ಇಲ್ಲದಿದ್ದಾಗ ಬೇರೆ ಪದವೀಧರರಿಗೆ ಅವಕಾಶ ಕಲ್ಪಿಸಲಾಗಿತ್ತು. ಅಂದಿನ ಸಂದರ್ಭಕ್ಕೆ ಅದು ಸಮಯೋಜಿತವಾಗಿತ್ತು. ಈಗ ಸಾಕಷ್ಟು ಅರಣ್ಯ ಪದವೀಧರರೇ ಸಿಗುತ್ತಿರುವಾಗ ಅರಣ್ಯ ಇಲಾಖೆಯ 'ರೇಂಜ ಫಾರೆಸ್ಟ್ ಆಫೀಸರ್' ಮತ್ತು 'ಅಸಿಸ್ಟೆಂಟ್ ಕಾನ್ಸರ್ವೇಟರ್ ಆಫ್ ಫಾರೆಸ್ಟ್' ಹುದ್ದೆಗೆ ಬಿಎಸ್‌ಸಿ (ಫಾರೆಸ್ಟ್ರಿ) ಪದವಿಯನ್ನು ಕಡ್ಡಾಯ ಗೊಳಿಸುವುದರ ಜತೆ ಎಂಎಸ್ಸಿ (ಫಾರೆಸ್ಟ್ರಿ) ಮತ್ತು ಪಿಎಚ್.ಡಿ ಪದವೀಧರರಿಗೆ ನೇಮಕದಲ್ಲಿ ಹೆಚ್ಚಿನ ಪ್ರಾಶಸ್ತ್ಯ ಕೊಡುವುದು ಸೂಕ್ತ.

ಸರಕಾರ ಈ ದಿಸೆಯಲ್ಲಿ ತಕ್ಷಣ ಕ್ರಮ ಕೈಗೊಂಡು ಸೂಕ್ತ ಆದೇಶ ಹೊರಡಿಸಬೇಕು.

**ಬೆಂಗಳೂರು** **ಡಾ. ಬಿ.ಎಸ್. ನಾಡಗೌಡರ**

ವಿಜಯ ಕರ್ನಾಟಕ
09 ಡಿಸೆಂಬರ್ 2010